
ಜನಪ್ರಿಯ ಕಲಾಮಾಲಿಕೆ

ಗ್ರಾಫಿಕ್ ಕಲೆ



ರವಿಕುಮಾರ್ ಕಾಶಿ

ಕರ್ನಾಟಕ ಲಲಿತಕಲಾ ಅಕಾಡೆಮಿ

ಗ್ರಾಫಿಕ್ ಕಲೆ

(ಪ್ರಿಂಟ್ ಮೇಕಿಂಗ್)

ರವಿಕುಮಾರ್ ಕಾಶಿ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–560 002

GRAPHIC KALE *by Ravikumar Kashi,*
Published by K. Mukundan, Registrar.
Karnataka Lalithakala Academy
Nrupatunga Road, Bangalore - 560 002

First Impression : 1996

ಬೆಲೆ : ರೂ. 5–00

ಮುಖಚಿತ್ರ : **ಚಂದ್ರನಾಥ ಆಚಾರ್ಯ ಅವರ ಕೃತಿ**

ಸಂಪಾದಕರು : **ಚಿ.ಸು. ಕೃಷ್ಣ ಸೆಟ್ಟಿ**

ಈ ಪುಸ್ತಕದಲ್ಲಿ ಬರುವ ಅಭಿಪ್ರಾಯಗಳು
ಆಯಾ ಲೇಖಕರದ್ದೇ ಹೊರತು
ಅಕಾಡೆಮಿಯದೆಂದು ತಿಳಿಯಲಾಗದು.

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು–18
ದೂರವಾಣಿ : 6618752, 6613123

ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಾಸ್ವಾದನೆ, ಕಲಾ ಪಂಥಗಳು– ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಾಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣಿತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಸಿ. ಚಂದ್ರಶೇಖರ
ಅಧ್ಯಕ್ಷರು

ಗ್ರಾಫಿಕ್ ಕಲೆ

ದೃಶ್ಯಕಲೆಯ ಮಾಧ್ಯಮಗಳಾದ ರೇಖಣೆ, ಚಿತ್ರಕಲೆ ಮತ್ತು ಶಿಲ್ಪದ ರೀತಿಯಲ್ಲಿ ಮುದ್ರಣ ಮಾಧ್ಯಮ ಸಹ ಅತ್ಯಂತ ಪ್ರಭಾವಶಾಲಿ ಅಭಿವ್ಯಕ್ತಿ ಸಾಧನ. ಪ್ರಿಂಟ್ ಮೇಕಿಂಗ್ ಅಥವಾ ಗ್ರಾಫಿಕ್ ಕಲೆ ಎಂದು ಕರೆಯಲ್ಪಡುವ ಇದಕ್ಕೆ ಇತರ ಮಾಧ್ಯಮಗಳಂತೆ ತನ್ನದೇ ಆದ ಅನನ್ಯ ಸಾಧ್ಯತೆಗಳೂ, ಅನೇಕ ಮಿತಿಗಳೂ ಇವೆ. ತಾಂತ್ರಿಕ ಮಾಧ್ಯಮವಾದ ಮುದ್ರಣದ ತಂತ್ರಗಳೊಡ್ಡುವ ಅನೇಕ ಮಿತಿಗಳ ನಡುವೆಯೂ ಚುರುಕಾದ, ಮನಮುಟ್ಟುವ ಅಭಿವ್ಯಕ್ತಿಯನ್ನು ಸಾಧಿಸುವುದು ಸುಲಭವಾದ ಕೆಲಸವೇನಲ್ಲ.

ಈ ಲೇಖನದಲ್ಲಿ ಗ್ರಾಫಿಕ್ ಕಲೆ ಅಥವಾ ಮುದ್ರಣ (Print Making) ಕಲೆಯ ವ್ಯಾಖ್ಯಾನ, ಮುದ್ರಣದ ಇತಿಹಾಸ, ಮುದ್ರಣ ತಂತ್ರಗಳು, ಮುದ್ರಣ ಮಾಧ್ಯಮ ಸಾಧ್ಯತೆ ಮಿತಿಗಳು ಹಾಗೂ ಮುದ್ರಿತ ಪ್ರತಿಯಲ್ಲಿ ಕಂಡುಬರುವ ಪದಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ.

'ಮುದ್ರಣ ಕಲೆ' (ಗ್ರಾಫಿಕ್ ಕಲೆ) ಎನ್ನುವಾಗ ಅನೇಕರು ವಾಣಿಜ್ಯ ಮುದ್ರಣವೆಂದು ಕಲ್ಪಿಸಿಕೊಳ್ಳುತ್ತಾರೆ. ಆದರೆ ವಾಣಿಜ್ಯ ಮುದ್ರಣಕ್ಕೂ (Commercial Printing) ಮುದ್ರಣ ತಂತ್ರಗಳನ್ನು ಕಲೆಯ ಮಾಧ್ಯಮವಾಗಿ ಬಳಸಿಕೊಂಡು ಕೃತಿ ರಚಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ವಾಣಿಜ್ಯ ಮುದ್ರಣದಲ್ಲಿ ಛಾಯಾಚಿತ್ರ (Text) ಗಳನ್ನೂ, ಪಾಠವನ್ನೂ ಮೂಲದಿಂದ ಮರು ಮುದ್ರಿಸುತ್ತಾರೆ. ಅದನ್ನು ಪುನರ್ ಮುದ್ರಣ, ಪುನರುತ್ಪತ್ತಿ (Reproduction)ಎನ್ನಬಹುದು. ಆದರೆ ಮುದ್ರಣ ಕಲೆಯಲ್ಲಿ 'ಪ್ರತಿ' (Print) ಎನ್ನುವ ಪದದ ಹಿಂದೆ ಭಿನ್ನವಾದ ವ್ಯಾಖ್ಯೆ, ಹಿನ್ನೆಲೆ ಇದೆ.

'ಮುದ್ರಣ ಕಲೆ' (Print Making) ಯ ಪ್ರಕಾರ ಕೃತಿಯೊಂದು 'ಮೂಲ ಮುದ್ರಿತ ಪ್ರತಿ' (original) ಎಂದು ಕರೆಸಿಕೊಳ್ಳಲು ಈ ಕೆಳಗೆ ನೀಡಿರುವ ಅಂತಾರಾಷ್ಟ್ರೀಯ ನಿಯಮಗಳಿಗೆ ಬದ್ಧವಾಗಿರಬೇಕು.

೧) ಕಲಾವಿದ ಮೂಲ ಚಿತ್ರ/ಅಚ್ಚನ್ನು (Matrix) ಲೋಹ, ಕಲ್ಲು, ಮರದ ಹಲಗೆ, ಸ್ಟೆನ್ಸಿಲ್‌ಗಳು ಅಥವಾ ಇತರ ವಸ್ತುಗಳ ಮೇಲೆ/ವಸ್ತುಗಳಿಂದ ಮುದ್ರಣವನ್ನು ಉದ್ದೇಶಿಸಿಯೇ ರಚಿಸಿರಬೇಕು. ಮುಂಚೆಯೇ ರಚಿಸಲಾಗಿರುವ ತೈಲವರ್ಣ ಚಿತ್ರ ಅಥವಾ ಜಲವರ್ಣ ಚಿತ್ರ

ಅಥವಾ ಇನ್ನಾವುದೇ ಕೃತಿಯನ್ನು ಛಾಯಾಚಿತ್ರ ತಂತ್ರವನ್ನು ಬಳಸಿ ವರ್ಗಾವಣೆ ಮಾಡುವಂತಿಲ್ಲ.


೨) ಮುದ್ರಿತವಾದ ಪ್ರತಿ ಮೇಲೆ ಹೇಳಿದ ಮೂಲಗಳಿಂದಲೇ ತಯಾರಾಗಿರಬೇಕು.

೩) ಮುದ್ರಣವನ್ನು ಹಸ್ತಮುದ್ರಣ ತಂತ್ರ ಅಥವಾ ಅರೆತಾಂತ್ರಿಕ ರೀತಿಯಲ್ಲೇ ಮಾಡಬಹುದು.

೪) ಎಲ್ಲ ಪ್ರತಿಗಳ ಗುಣಮಟ್ಟವನ್ನು ಕಲಾವಿದ ಸ್ವತಃ ಪರೀಕ್ಷಿಸಿ, ಆವೃತ್ತಿಯ ಸಂಖ್ಯೆ ಹಾಗೂ ಪ್ರತಿಯ ಸಂಖ್ಯೆಗಳು (೧/೨೦, ೫/೨೦, ೨೦/೨೦) ಬರೆದು, ದಿನಾಂಕದೊಂದಿಗೆ ಸಹಿ ಮಾಡಬೇಕು.


ಮುದ್ರಣ ಕಲೆಯಲ್ಲಿ ಇಂದು ಹೊಸ ಹೊಸ ಮಾಧ್ಯಮಗಳೂ, ತಂತ್ರಗಳೂ ಸೇರಿಕೊಳ್ಳುತ್ತಾ ನಡೆದಿವೆ. ಆದರೆ ಇವಾವುವೂ ಸಾಂಪ್ರದಾಯಿಕ ಮುದ್ರಣದ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಹಾಗಾಗಿ ಯಾವುದು ಮೂಲಪ್ರತಿ (ನಮ್ಮ ಕಾಲಕ್ಕೆ) ಎಂಬುದನ್ನು ನಿರ್ಧರಿಸಲು ವೃತ್ತಿಪರ ಸಂಸ್ಥೆಗಳು, ಮ್ಯೂಸಿಯಮ್‌ಗಳು, ಗ್ಯಾಲರಿಗಳು, ಅಂತಾರಾಷ್ಟ್ರೀಯ ವೇದಿಕೆಗಳು ಚರ್ಚೆ, ವಿಮರ್ಶೆಗಳನ್ನು ನಡೆಸಿ ಹೆಣಗುತ್ತಲೇ ಇವೆ. ಮೇಲಿನ ವಿವರಗಳನ್ನು ಅಮೆರಿಕದ ಪ್ರಿಂಟ್ಸ್ ಕೌನ್ಸಿಲ್, ಫ್ರಾನ್ಸಿನ ರಾಷ್ಟ್ರೀಯ ಎನ್‌ಗ್ರೇವಿಂಗ್ ಕಮಿಟಿ ಹಾಗೂ ಮೂರನೇ ಅಂತಾರಾಷ್ಟ್ರೀಯ ದೃಶ್ಯಕಲೆಗಳ ಅಧಿವೇಶನ ಇವು ಅಂಗೀಕರಿಸಿವೆ. ಆದರೂ ಈ ಶಿಸ್ತಿಗೆ ಸಂಬಂಧಿಸಿದ ಎಲ್ಲರೂ ಒಮ್ಮತಕ್ಕೆ ಬಂದು ಈ ವಿವರಣೆಯನ್ನು ಒಪ್ಪುವ ತನಕ ಇದನ್ನು ಮಾರ್ಗಸೂಚಿ ಎಂದಷ್ಟೇ ತಿಳಿಯಬೇಕು.

ಮುದ್ರಣ ಕಲೆಯಲ್ಲಿ ಪ್ರಮುಖವಾಗಿ ನಾಲ್ಕು ಪ್ರಚಲಿತ ತಂತ್ರಗಳಿವೆ. ರಿಲೀಫ್ ಮುದ್ರಣ, ಇಂಟಾಗ್ಲಿಯೋ ಮುದ್ರಣ, ಲಿಥೋಗ್ರಾಫಿ ಮುದ್ರಣ ಹಾಗೂ ಸೆರಿಗ್ರಾಫಿ ಮುದ್ರಣ. ಈ ನಾಲ್ಕು ಪ್ರಮುಖ ತಂತ್ರಗಳಲ್ಲದೆ ಅನೇಕ ಸಣ್ಣಪುಟ್ಟ ಇನ್ನಷ್ಟು ವಿಭಾಗಗಳೂ, ವಿಶಿಷ್ಟ ತಂತ್ರ ವಿಶೇಷಗಳೂ ಇವೆ.






ಡ್ರೈ ಪಾಯಿಂಟ್ ಉಪಕರಣ ವಿದಾನ



ರಿಲೀಫ್ ಮುದ್ರಣ

ರಿಲೀಫ್ ತಂತ್ರ




ರಿಲೀಫ್ ಮುದ್ರಣವು (ಉಬ್ಬಚ್ಚು ಮುದ್ರಣವು) ಉಳಿದೆಲ್ಲ ಮುದ್ರಣ ವಿಧಾನಗಳಿಗಿಂತ ಪುರಾತನ ಮತ್ತು ಸರಳವಾದುದು. ಕಲಾವಿದ ಸಮತಟ್ಟಾದ ಮರದ ಹಲಗೆಯಲ್ಲಿ ಕೆಲವು ಭಾಗಗಳನ್ನು ಮಾತ್ರ ಕೆತ್ತಿ ತೆಗೆಯುತ್ತಾನೆ. ಆ ಹಲಗೆಯ ಮೇಲ್ಭಾಗಕಕ್ಷ್ಟೆ ರೋಲರ್‌ಅನ್ನು ಬಳಸಿ ಇಂಕನ್ನು ಸವರಿ ಪ್ರತಿ ತೆಗೆಯಲಾಗುತ್ತದೆ. ಕೆತ್ತಿದ ಭಾಗಗಳು ಕೆಳಮಟ್ಟದಲ್ಲಿರುವುದರಿಂದ ಅಲ್ಲಿ ಇಂಕ್ ಹತ್ತುವುದಿಲ್ಲ. ಹಾಗಾಗಿ ಆ ಜಾಗಗಳು ಮುದ್ರಿತ ಪ್ರತಿಯಲ್ಲಿ ಖಾಲಿ ಜಾಗಗಳಾಗಿ ಕಾಣಬರುತ್ತದೆ. ರಿಲೀಫ್ ಮುದ್ರಣ ತಂತ್ರದಲ್ಲಿ ಮುಖ್ಯವಾಗಿ ಮರ ಮತ್ತು ಲಿನೋಗಳಲ್ಲದೆ ಕಲ್ಲು, ಪ್ಲಾಸ್ಟರ್ ಆಫ್ ಪ್ಯಾರಿಸ್, ಪ್ಲಾಸ್ಟಿಕ್, ಲೋಹದ ಹಾಳೆ, ಕಾರ್ಡ್, ಆಲೂಗಡ್ಡೆ, ಬಟ್ಟೆ ಹೀಗೆ ಅನೇಕ ಇತರ ವಸ್ತುಗಳನ್ನು ಬಳಸಬಹುದು. ಆದರೆ ಹೆಚ್ಚು ಪ್ರಚಲಿತದಲ್ಲಿರುವುದು ಮರ ಮತ್ತು ಲಿನೋಗಳನ್ನು ಬಳಸಿ ಮಾಡುವ ವುಡ್‌ಕಟ್, ವುಡ್ ಎನ್‌ಗ್ರೇವಿಂಗ್ ಮತ್ತು ಲಿನೋಕಟ್.

ವುಡ್‌ಕಟ್ ಇತಿಹಾಸ

ಪುರಾತನ ಈಜಿಪ್ಷಿಯನ್ನರು, ಭಾರತೀಯರು ಹಾಗೂ ಅರಬರು ಮರದಚ್ಚು (ವುಡ್‌ಕಟ್) ಮುದ್ರಣ ತಂತ್ರವನ್ನು ಬಹಳ ಹಿಂದೆಯೇ ಬಳಸಿದ ಪುರಾವೆಗಳಿವೆ. ಏಳನೇ ಶತಮಾನದ ವೇಳೆಗೆ ಚೀನಾದಲ್ಲಿ ಪಾಠ ಮತ್ತು ವಿನ್ಯಾಸ ಎರಡನ್ನೂ ಒಂದೇ ಅಚ್ಚಿನ ಮೇಲೆ ಕೆತ್ತಿ ಕಾಗದದ ಮೇಲೆ ಮುದ್ರಿಸುತ್ತಿದ್ದರು.

ಯೂರೋಪಿನಲ್ಲಿ ೧೪ನೇ ಶತಮಾನದಲ್ಲಿ ಕಾಗದದ ಬಳಕೆ ಆರಂಭವಾಗಿ, ೧೫ನೇ ಶತಮಾನದ ವೇಳೆಗೆ ಮರದಚ್ಚು ಮುದ್ರಣತಂತ್ರಗಳು ಸುಧಾರಿತಗೊಂಡವು. ಕಲಾವಿದ ಆಲ್ಬರ್ಟ್ ಡ್ಯೂರರ್ ಈ ತಂತ್ರವನ್ನು ಹೆಚ್ಚೆಚ್ಚು ವಿನೂತನಗೊಳಿಸಿ, ಅನೇಕ ಬದಲಾವಣೆಗಳನ್ನು



ವುಡ್‌ಕಟ್ ಉಪಕರಣಗಳು ಅವನ್ನು ಬಳಸುವ ವಿಧಾನ


ತಂದು ಅದನ್ನು ಕೇವಲ ಮುದ್ರಣ ತಂತ್ರದ ಸ್ಥಾನದಿಂದ ಮೇಲೆತ್ತಿ ಕಲೆಯ ಸ್ಥಾನದಲ್ಲಿಟ್ಟ. ಚೀನಾ ಮತ್ತು ಜಪಾನುಗಳಲ್ಲಿ ೧೮ ಮತ್ತು ೧೯ನೇ ಶತಮಾನದ ವೇಳೆಗೆ ಮರದಚ್ಚು ಮುದ್ರಣ ಕಲೆ ತನ್ನ ಗಮನಾರ್ಹ ಸ್ಥಾನವನ್ನು ಪಡೆಯಿತು. ಈ ತಂತ್ರ ಜಪಾನಿನ ಉಕಿಯೋ–ಮಿ (ತೇಲುವ ಲೋಕದ ಶೈಲಿಯ ಮಾಸನೋಬು, ಶರಾಕು, ಉತಮಾರೋ, ಹಿರೋಶಿಗೆ, ಹೊಕುಸೈ ಇವರ ಕೃತಿಗಳಲ್ಲಿ ಸಾರ್ಥಕತೆಯನ್ನು ಪಡೆಯಿತು. ಫ್ರೆಂಚ್ ಕಲಾವಿದ ಗಾಗಿನ್‌ನಂತಹವರು ಈ ಜಪಾನಿ ಮರದಚ್ಚು ಕೃತಿಗಳಿಂದ ತುಂಬ ಪ್ರಭಾವಿತರಾದರು. ಜರ್ಮನಿಯಲ್ಲಿ ಈ ಶತಮಾನದ ಮೊದಲಲ್ಲಿ 'ದಿ ಬ್ರಿಡ್ಜ್' ಎಂಬ ಸಮೂಹದ ಕಲಾವಿದರು ಈ ಮಾಧ್ಯಮವನ್ನು ಅದರ ತಂತ್ರದ ನೇರ ಅಭಿವ್ಯಕ್ತಿಯ ಸಾಧ್ಯತೆಗಳನ್ನೂ ತಮ್ಮದಾಗಿಸಿಕೊಂಡರು.

ನಮ್ಮಲ್ಲಿ ಹಿಂದೆ ಬಟ್ಟೆಗಳ ವಿನ್ಯಾಸ ಮುದ್ರಣಕ್ಕೆ ಮಾತ್ರ ಬಳಕೆಯಾದ ಈ ತಂತ್ರ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಚಿತ್ರಣ ಉದ್ದೇಶಗಳಿಗೆ ಬಳಕೆಯಾಯಿತು. ಕಂಪೆನಿ ಶೈಲಿಯ ಬಾಜಾರ ಚಿತ್ರಗಳಲ್ಲಿ ಮರದಚ್ಚು ಮುದ್ರಣ ತಂತ್ರ ಬಳಕೆಯಾಗಿ, ವಾಣಿಜ್ಯ ಮುದ್ರಣಕ್ಕೂ ಬಳಕೆಯಾಯಿತು.. ನಂತರ ಶಾಂತಿನಿಕೇತನದ ಶಾಲೆಯಿಂದಾಗಿ ಭಾರತದೆಲ್ಲೆಡೆ ಕಲಾವಿದರಲ್ಲಿ ಪ್ರಚುರಗೊಂಡಿತು. ಭಾರತ ಅನೇಕ ಸಮರ್ಥ ಮರದಚ್ಚು ಮುದ್ರಣ ಕಲಾಕಾರರನ್ನು ನೀಡಿದೆ. ನಂದಲಾಲ್ ಬೋಸ್, ಸ್ವಪನ್‌ದಾಸ್, ಸುರಂಜನ್ ಬಸು, ವಾಲ್ಟರ್ ಡಿ'ಸೋಜ, ಸನತ್‌ಕರ್, ಆರ್. ಬಿ. ಭಾಸ್ಕರನ್, ದತ್ತಾತ್ರೇಯ ಆಪಟೆ, ಜಯಂತಿ ರಾಬಡಿಯ, ರಿನಿ ಧುಮಾಲ್, ಜೆ. ಎಂ. ಎಸ್. ಮಣಿ ಮುಂತಾದ ಕಲಾವಿದರು ಈ ಮಾಧ್ಯಮದಲ್ಲಿ ಅನೇಕ ಉತ್ಕೃಷ್ಟ ಕೃತಿಗಳನ್ನು ರಚಿಸಿದ್ದಾರೆ.

ವುಡ್‌ಕಟ್ ಉಪಕರಣಗಳು

ವುಡ್‌ಕಟ್‌ನಲ್ಲಿ ಬಳಸುವ ಉಪಕರಣಗಳಲ್ಲಿ ಮೂರು ಮುಖ್ಯ ಬಗೆ. ಚಾಕು, V ಆಕಾರದ ಹಾಗೂ U ಆಕಾರದ ಕೆತ್ತುವ ಸಾಧನಗಳು ಪ್ರಮುಖ. ಚಾಕುವನ್ನು ಹೊರ ಅಂಚಿನ ರೇಖೆಗಳನ್ನು ಕೊಯ್ಯುವುದಕ್ಕಾಗಿ ಮತ್ತು ಇನ್ನುಳಿದ ಎರಡನ್ನು ಮರದ ಭಾಗಗಳನ್ನು ಕೆತ್ತಿ ಹೊರತೆಗೆಯುವುದಕ್ಕಾಗಿ ಬಳಸುವರು. ಇದಲ್ಲದೆ ಅಗಲವಾದ ಭಾಗಗಳನ್ನು ಕೆತ್ತಲು ಚಪ್ಪಟೆಯಾದ ಉಳಿಗಳನ್ನು ಸಹ ಬಳಸಬಹುದು.

ಈ ರೀತಿಯ ಸಾಂಪ್ರದಾಯಿಕ ಉಪಕರಣಗಳನ್ನು ಬಿಟ್ಟು ಲೋಹದ ಒತ್ತಚ್ಚುಗಳನ್ನು ಬೇರೆ ಬೇರೆ ಮೈವಳಿಕೆ (Texture) ಸೃಷ್ಟಿಗಾಗಿ ಬಳಸಬಹುದು. ವಿದ್ಯುತ್ ಡ್ರಿಲ್‌ಗಳನ್ನು ಮರವನ್ನು ಕೊಯ್ಯಲು, ಕೆತ್ತಲು, ರಂಧ್ರ ಮಾಡಲು ಸಹ ಬಳಸಬಹುದು.



ವುಡ್ ಎನ್‌ಗ್ರೇವಿಂಗ್ ಉಪಕರಣ ಬಳಸುವ ವಿಧಾನ

ಚಾಕು U ಆಕಾರ V ಆಕಾರ


ವುಡ್ ಎನ್‌ಗ್ರೇವಿಂಗ್

ತಾಮ್ರದ ಮೇಲೆ ಬಳಸುವ ಎನ್‌ಗ್ರೇವಿಂಗ್ ಉಪಕರಣಗಳನ್ನು ಅಡ್ಡಕೊಯ್ದ (End Grain Cutting) ಬಾಕ್ಸ್ ಮರದ ಹಲಗೆಯ ಮೇಲೆ ಬಳಸುವ ತಂತ್ರವನ್ನು ಥಾಮಸ್ ಬೆವಿಕ್ ಎಂಬುವನು ೧೮ನೇ ಶತಮಾನದಲ್ಲಿ ಆರಂಭಿಸಿದ.

ಮೊತ್ತ ಮೊದಲಲ್ಲಿ ವುಡ್ ಎನ್‌ಗ್ರೇವಿಂಗ್ ಪುಸ್ತಕಗಳಿಗೆ ಸಾಂದರ್ಭಿಕ ಚಿತ್ರಗಳನ್ನು ಒದಗಿಸುವ ತಂತ್ರವಾಗಿತ್ತು. ೧೯ನೇ ಶತಮಾನದ ಅಂತ್ಯದ ವೇಳೆಗೆ ಛಾಯಾಗ್ರಹಣ ತಂತ್ರದಿಂದ ತಯಾರಿಸಿದ ಲೋಹದ ಅಚ್ಚು(ಬ್ಲಾಕ್)ಗಳಿಂದಾಗಿ ವುಡ್ ಎನ್‌ಗ್ರೇವಿಂಗ್‌ನ ಜನಪ್ರಿಯ ವಾಣಿಜ್ಯ ಬಳಕೆ ತಪ್ಪಿ ಹೋಗಿ ಕೇವಲ ಕಲಾವಿದರು ಮಾತ್ರ ಇಂದು ಆ ತಂತ್ರವನ್ನು ಹೆಚ್ಚಾಗಿ ಬಳಸುತ್ತಾರೆ.

ವುಡ್ ಎನ್‌ಗ್ರೇವಿಂಗ್ ಉಪಕರಣಗಳು

ವುಡ್ ಎನ್‌ಗ್ರೇವಿಂಗ್‌ಗೆ ಉಪಕರಣಗಳನ್ನು ಉತ್ತಮ ದರ್ಜೆಯ ಕಬ್ಬಿಣದಿಂದ ತಯಾರಿಸಿ ನಾಯಿಕೊಡೆ ಆಕಾರದ ಹಿಡಿಯಲ್ಲಿ ಕೂಡಿಸಲಾಗುತ್ತದೆ. ಎನ್‌ಗ್ರೇವಿಂಗ್‌ನಲ್ಲಿ ಮೂಲ ಉಪಕರಣವೇ ಗ್ರೇವರ್. ಇದು ಚೌಕ ಅಥವಾ ವಜ್ರಾಕೃತಿಯದಾಗಿರುತ್ತದೆ. ಹಿಡಿಯಲ್ಲಿ ಇದನ್ನು ಓರೆಯಾಗಿ ಕೂರಿಸಲಾಗುತ್ತದೆ. ಚೌಕಾಕಾರದಲ್ಲಿ ಗ್ರೇವರ್‌ಗಳು ಸ್ವಲ್ಪ ಅಗಲವಾದ ರೇಖೆಗಳನ್ನು , ವಜ್ರಾಕಾರದ ಗ್ರೇವರ್‌ಗಳು ಸೂಕ್ಷ್ಮವಾದ, ನೇರ, ಸರಳ ರೇಖೆಗಳನ್ನು ಕೆತ್ತಲು ಹಾಗೂ ಟಿಂಟ್ ಗ್ರೇವರ್‌ಗಳು ರೇಖೆಗಳ ಜಾಲವನ್ನು ಕೆತ್ತಲು ಬಳಕೆಯಾಗುತ್ತವೆ.



ಲಿನೋ ಹಾಳೆ ಲಿನೋಕಟ್ ಉಪಕರಣಗಳು ಬಳಸುವ ವಿಧಾನ

ಲಿನೋ ಕಟ್

ವಿಶೇಷ ಕಾರ್ಕ್ ರೀತಿಯ ವಸ್ತುವಿನಿಂದ ತಯಾರಾದ ಹಾಳೆ ಲಿನೋಲಿಯಮ್. ವುಡ್‌ಕಟ್‌ನಂತಹುದೇ ಪರಿಣಾಮವನ್ನು ಲಿನೋಕಟ್‌ನಲ್ಲಿ ಪಡೆಯಬಹುದು. ಲಿನೋದ ಮೇಲ್ಮೈ ಮೃದುವಾಗಿದ್ದು ಕೆತ್ತನೆ ಸುಲಭ. ಆದರೆ ಉಪಕರಣವು ಚೂಪಾಗಿಲ್ಲದಿದ್ದರೆ ಒರಟಾದ ರೇಖೆಗಳು ಉಂಟಾಗುತ್ತವೆ.

ಲಿನೋವನ್ನು ಕೆತ್ತುವ ಮುಂಚೆ ಪ್ಲೈವುಡ್ ಹಲಗೆಯ ಮೇಲೆ ಅಂಟಿಸುವುದು ವಾಡಿಕೆ. ಇದರಿಂದ ಬಹುರಂಗೀಯ ಮುದ್ರಣವನ್ನು ಮಾಡುವಾಗ ವಿವಿಧ ವರ್ಣಗಳನ್ನು ಸರಿಯಾದ ಸ್ಥಳಗಳಲ್ಲಿ ಕೂರಿಸುವುದು (ರಿಜಿಸ್ಟ್ರೇಷನ್) ಸುಲಭ.

ರಿಲೀಫ್ ಮುದ್ರಣದ ತಂತ್ರಗಳು

ಹಸ್ತಮುದ್ರಣ – ಸೂಕ್ಷ್ಮವಾದ ಕೆತ್ತನೆಯಿರುವ ಅಚ್ಚನ್ನು ಮುದ್ರಿಸಲು ರಬ್ಬರಿನ ರೋಲರ್ ಮತ್ತು ಜಿಗುಟಾದ ಇಂಕನ್ನು ಬಳಸಿದಲ್ಲಿ ಉತ್ತಮ. ಮೃದುವಾದ ರೋಲರ್ ಮತ್ತು ಸಡಿಲವಾದ ಇಂಕನ್ನು ಬಳಸಿದಲ್ಲಿ ಮುದ್ರಣವು ಮುಂದುವರೆದಂತೆ ಸೂಕ್ಷ್ಮ ರೇಖೆಗಳು ಮುಚ್ಚಿಹೋಗುವ ಸಂಭವವುಂಟು. ರೋಲರ್ ಇಲ್ಲದಿದ್ದಲ್ಲಿ ಡ್ಯಾಬರ್ (ಚರ್ಮದ ಉಬ್ಬಿದ ಉಪಕರಣ) ಅಥವಾ ಕುಂಚವನ್ನೂ ಸಹ ಬಳಸಬಹುದು.

ಈ ವಿಧಾನದಲ್ಲಿ ಬಳಸುವ ಕಾಗದ ತೆಳುವಾಗಿದ್ದು ಇಂಕನ್ನು ಒಮ್ಮೆಲೆ ಹೀರಿಕೊಳ್ಳುವ ಗುಣ ಹೊಂದಿರುತ್ತದೆ. ಮುದ್ರಣಕ್ಕೆ ಮುನ್ನ ಕಾಗದವನ್ನು ಹಸಿಯಾದ ಇನ್ನೆರಡು ಕಾಗದಗಳ ನಡುವೆ ಇಟ್ಟಲ್ಲಿ ತೇವವಾದ ಕಾಗದವು ಮೃದುವಾಗಿ ಉತ್ತಮ ಮಟ್ಟದ ಮುದ್ರಣಕ್ಕೆ ಕಾರಣವಾಗುತ್ತದೆ. ಕಾಗದವನ್ನು ಇಂಕನ್ನು ಹರಡಿದ ಅಚ್ಚಿನ ಮೇಲೆ ಇಟ್ಟು ಹಿಂಬದಿಯಿಂದ ಕಾಗದವನ್ನು ಉಜ್ಜಿ ಚಿತ್ರವನ್ನು ಕಾಗದಕ್ಕೆ ವರ್ಗಾಯಿಸಲಾಗುತ್ತದೆ. ಹೀಗೆ ಉಜ್ಜಲು ಯಾವುದೇ ನಯವಾದ ಗೋಲಾಕಾರದ ವಸ್ತುವನ್ನೂ ಬಳಸಬಹುದು. ಚಮಚದ ಹಿಂಬದಿ ಸೂಕ್ತವಾದ್ದು.

ಯಾಂತ್ರಿಕ ಮುದ್ರಣ–ಮುಂಚಿನಂತೆಯೇ ಅಚ್ಚಿಗೆ ಇಂಕನ್ನು ಸವರಲಾಗುತ್ತದೆ. ಇದಕ್ಕಾಗಿಯೇ ವಿಶಿಷ್ಟವಾಗಿರುವ ಯಂತ್ರದಲ್ಲಿ ಹಾಯಿಸುವ ಮುನ್ನ ಅಚ್ಚಿನ ಕೆಳಬದಿಗೆ ಹಾಗೂ ಕಾಗದದ ಮೇಲ್ಬದಿಗೆ ಒತ್ತುಕಾಗದ ನೀಡಬೇಕಾದ್ದು ಅಗತ್ಯ. ಇದಕ್ಕೆ ಒತ್ತು ಕಾಗದದ ಬದಲು ಕೆಲವೊಮ್ಮೆ

ರಬ್ಬರ್ ಹಾಳೆಗಳನ್ನು ಬಳಸುತ್ತಾರೆ. ಯಂತ್ರದ ಒತ್ತಡವನ್ನೂ ಸಹ ಮುದ್ರಣಕ್ಕೆ ಮುಂಚೆಯೇ ನಿರ್ಧರಿಸಬೇಕು. ಕಮ್ಮಿ ಒತ್ತಡ ಇದ್ದಲ್ಲಿ ಗಾಢವಾದ ಪ್ರತಿಯನ್ನು ತೆಗೆಯಲಾಗುವುದಿಲ್ಲ. ಒತ್ತಡ ಅಧಿಕವಾದಲ್ಲಿ ಸೂಕ್ಷ್ಮವಾದ ವಿವರಗಳು ನಿಧಾನವಾಗಿ ಮುಚ್ಚಿ ಹೋಗುತ್ತವೆ.

ರಿಲೀಫ್ ಮುದ್ರಣದ ಇತರ ತಂತ್ರಗಳು

ರಿಲೀಫ್ ಮುದ್ರಣದ ಅಚ್ಚನ್ನು ತಯಾರಿಸಲು ಮರ ಮತ್ತು ಲಿನೋಗಳೇ ಅಲ್ಲದೆ ಇತರ ಮಾಧ್ಯಮಗಳನ್ನೂ ಸಹ ಬಳಸಬಹುದು. ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ನಯವಾದ ಮೇಲ್ಮೈಯಲ್ಲಿ ಅನೇಕ ಗುರುತುಗಳನ್ನು ಒತ್ತಿ ಅದರ ಮುದ್ರಣವನ್ನು ಮಾಡಬಹುದು. ಆದರೆ ಮುದ್ರಿಸುವ ಪಿ.ವಿ.ಎ. ದ್ರಾವಣ ಅಥವಾ ಶೆಲ್ಲಾಕ್ ದ್ರಾವಣದ ಒಂದು ತೆಳುಪದರವನ್ನು ನೀಡುವುದು ಅತ್ಯವಶ್ಯ.

ಆಕ್ರಿಲಿಕ್ ಹಾಳೆ, (ಪರ್ಸ್‌ಫೇಕ್ಸ್, ಲ್ಯೂಸೈಟ್) ಡೆಕೋಲ್ಯಾಮ್‌ಗಳನ್ನು ಎನ್‌ಗ್ರೇವಿಂಗ್‌ಗೆ ಬಳಸಬಹುದು. ಅಷ್ಟೇ ಅಲ್ಲ ಕಾರ್ಡ್‌ಬೋರ್ಡ್ ಹಾಳೆ ಅಥವಾ ಇತರ ವಸ್ತುಗಳನ್ನು ಅವಶ್ಯವಾದ ಆಕಾರದಲ್ಲಿ ಕತ್ತರಿಸಿ, ಯಾವುದಾದರೊಂದು ಗಟ್ಟಿಹಾಳೆಯ ಮೇಲೆಯೋ ಅಥವಾ ಪ್ಲೈವುಡ್ ಹಲಗೆಯ ಮೇಲೋ ಅಂಟಿಸಿ, ಅದರ ಮೇಲೆ ಶೆಲ್ಲಾಕ್‌ನ ಪದರ ಸವರಿ ನಂತರ ಪ್ರತಿ ತೆಗೆಯಬಹುದು. ಹೀಗೆ ವಸ್ತುಗಳನ್ನು ಅಂಟಿಸಿ ಮುದ್ರಿಸುವ ರಿಲೀಫ್ ವಿಧಾನಕ್ಕೆ 'ಕೊಲೋಗ್ರಾಫ್' (Collograph) ಎನ್ನುವರು.

ಇಂಟಾಗ್ಲಿಯೋ ಮುದ್ರಣ

ಇಂಟಾಗ್ಲಿಯೋ ತಂತ್ರ



ಇಂಕ್

ಜಿಂಕ್ ಹಾಳೆ

ಇಂಟಾಗ್ಲಿಯೋ ಮುದ್ರಣ ತಂತ್ರದಲ್ಲಿ ರೇಖೆಗಳನ್ನು ಲೋಹದ ಪ್ಲೇಟ್‌ನ ಆಳಕ್ಕೆ ಕೆತ್ತಲಾಗುತ್ತದೆ. ಅಥವಾ ಆಮ್ಲದಿಂದ ಕೊರೆಯಲಾಗುತ್ತದೆ. ತಯಾರಾದ ಪ್ಲೇಟನ್ನು ಇಂಕ್ ಹಚ್ಚಿದ ನಂತರ ವಿಶಿಷ್ಟ ರೀತಿಯಲ್ಲಿ ಒರೆಸಿದಾಗ ಕೊರೆದ (ಹಳ್ಳದಂತಹ) ರೇಖೆಗಳಲ್ಲಿ ಮಾತ್ರ ಇಂಕ್ ಉಳಿದುಕೊಂಡು ಮೇಲ್ಮೈಯು ಶುಭ್ರವಾಗುತ್ತದೆ. ತೇವವಾದ ಮೃದು ಕಾಗದವನ್ನು ಪ್ಲೇಟ್‌ನ ಮೇಲಿಟ್ಟು, ಕಾಗದ ಮತ್ತು ಪ್ಲೇಟ್ ಎರಡನ್ನೂ ಒಟ್ಟಿಗೆ ಎಚ್ಚಿಂಗ್ ಪ್ರೆಸ್‌ನಲ್ಲಿ ಹಾಯಿಸಲಾಗುತ್ತದೆ. ಎಚ್ಚಿಂಗ್ ಯಂತ್ರದಲ್ಲಿ ಮೇಲೆ ಮತ್ತು ಕೆಳಗೆ, ಎರಡೂ ಕಡೆಗಳಲ್ಲಿ ಇರುವ ಕಬ್ಬಿಣದ ರೋಲರ್‌ಗಳು ಬೀರುವ ಒತ್ತಡಕ್ಕೆ ಇಂಕು ಪ್ಲೇಟಿನಿಂದ ಕಾಗದಕ್ಕೆ ವರ್ಗಾವಣೆಯಾಗುತ್ತದೆ.

ಇಂಟಾಗ್ಲಿಯೋ ಮುದ್ರಣದ ಎರಡು ಪ್ರಮುಖ ತಂತ್ರಗಳೆಂದರೆ ಎನ್‌ಗ್ರೇವಿಂಗ್ ಮತ್ತು ಎಚ್ಚಿಂಗ್. ಎನ್‌ಗ್ರೇವಿಂಗ್‌ನಲ್ಲಿ ಬಿಂದು ಮತ್ತು ರೇಖೆಗಳನ್ನು ಬ್ಯೂರಿನ್ ಹಾಗೂ ಇತರ ಹರಿತವಾದ ಉಪಕರಣಗಳನ್ನು ಬಳಸಿ ಕೈಯಿಂದ ಕೆತ್ತಲಾಗುತ್ತದೆ. ಆದರೆ ಎಚ್ಚಿಂಗ್‌ನಲ್ಲಿ ಮೊದಲಿಗೆ ಆಮ್ಲ ನಿರೋಧಕ ಪದರವೊಂದನ್ನು ಹರಡಿ, ನಂತರ ಅದರಲ್ಲಿ ಚಿತ್ರವನ್ನು ಗೀಚಿದ ಜಾಗದಲ್ಲಿ ಪದರ ತೆರೆದುಕೊಂಡು ಆಮ್ಲವು ಪ್ಲೇಟನ್ನು ಕೊರೆಯುವಂತೆ ಮಾಡುತ್ತಾರೆ. ಆ ಮೂಲಕ ಆಳ ಮತ್ತು ಎತ್ತರಗಳು ನಿರ್ಮಾಣವಾಗುತ್ತವೆ.

ಎನ್‌ಗ್ರೇವಿಂಗ್


ಎನ್‌ಗ್ರೇವಿಂಗ್ ಬಳಕೆಯನ್ನು ಪೂರ್ವೈತಿಹಾಸಿಕ ಮನುಷ್ಯನವರೆಗೆ ಗುರುತಿಸಬಹುದು. ಕಲ್ಲು ಮತ್ತು ಗುಹೆಯಂತಹ ಒರಟಾದ ಮೇಲ್ಮೈ ಮೇಲೆ ಮಾನವ ರೇಖಾಚಿತ್ರಗಳನ್ನು ಕೊರೆದಿದ್ದಾನೆ. ಎನ್‌ಗ್ರೇವಿಂಗ್‌ಗೆ ಇನ್ನೂ ಹತ್ತಿರ ಬರುವ ತಂತ್ರವೆಂದರೆ ಗುರಾಣಿ ಮತ್ತು ಆಭರಣಗಳನ್ನು ಕೆತ್ತುತ್ತಿದ್ದ ಕಮ್ಮಾರ ಮತ್ತು ಚಿನಿವಾರನ ಕುಶಲತೆಗಳು. ಹದಿನೈದನೆ ಶತಮಾನದ 'ಕ್ರೈಸ್ತನ ನೋವು' ಎಂಬ ಜರ್ಮನ್ ಕೃತಿ ನಿಖರವಾದ ಮೊದಲನೇ ಎನ್‌ಗ್ರೇವಿಂಗ್. ಆಂದ್ರೆ ಮಾಂಟೆಗ್ನ (೧೪೩೧–೧೫೦೬), ಆಲ್ಬರ್ಟ್ ಡ್ಯೂರರ್ (೧೪೭೧–೧೫೨೮) ಇವರುಗಳು ರಚಿಸಿದ



ವಿಜಯ ಬಾಗೋಡಿ



ಶ್ಯಾಮಸುಂದರ



ಬಸವರಾಜ ಮುಸವಳಗಿ


ಗ್ರಾಫಿಕ್ ಕಲೆ




ಜಿ. ಜಯಕುಮಾರ




ಚಿ. ಸು. ಕೃಷ್ಣ ಸೆಟ್ಟಿ, ರೂಪಾಂತರ, –ಲಿಥೋಗ್ರಾಫ್



ನಿ. ಚಂದ್ರಶೇಖರ, ಸ್ಟಿಚ್ (1989) ಸೆರಿಗ್ರಫಿ




ಮಾಶಾಳಕರ್– ಎಸ್. ಎಚ್ – (ಲಿಥೊಗ್ರಫಿ)



ದೊಡ್ಡಮನಿ ಎಂ.ಜಿ. (ಕೋಲೊಗ್ರಾಫ್)

ಎನ್‌ಗ್ರೇವಿಂಗ್ ಉಪಕರಣಗಳು

ಬರ್ನಿಷರ್‌ಗಳು



ಎನ್‌ಗ್ರೇವಿಂಗ್‌ಗಳು ಅತ್ಯುತ್ತಮವಾದುವು. ಬಹಳ ಬೇಗ ತಾಮ್ರದ ಎನ್‌ಗ್ರೇವಿಂಗ್‌ಗಳು ಚಿತ್ರಗಳನ್ನು ಪುನರ್‌ಪ್ರತಿ ಮಾಡಿ ಎಲ್ಲೆಡೆ ಹಂಚುವ ಜನಪ್ರಿಯ ವಿಧಾನವಾಯಿತು. ವಿಲಿಯಂ ಹೊಗಾರ್ತ್ ಮತ್ತು ವಿಲಿಯಂ ಬ್ಲೇಕ್‌ರ ಎನ್‌ಗ್ರೇವಿಂಗ್‌ಗಳ ನಂತರ ಮರೆತುಹೋದಂತೆ ಆಗಿದ್ದ ಈ ತಂತ್ರವನ್ನು ಪುನರುಜ್ಜೀವನಗೊಳಿಸಿದವ ನವ್ಯ ಕಲಾವಿದ ಎಸ್.ಡಬ್ಲ್ಯೂ. ಹೇಟರ್.

ಎಚ್ಚಿಂಗ್ ಇತಿಹಾಸ


೧೬ನೇ ಶತಮಾನದ ಮೊದಲಲ್ಲಿ ಆಲ್ಬರ್ಟ್ ಡ್ಯೂರರ್ ಕೈಗೆತ್ತಿಕೊಂಡ ಈ ತಂತ್ರದ ಸಾಧ್ಯತೆಗಳು ಹದಿನೇಳನೇ ಶತಮಾನದ ವೇಳೆಗೆ ಸಾಕಷ್ಟು ಹಿರಿದಾದವು. ರೆಂಬ್ರಾಂಡ್‌ನ (೧೬೦೯–೧೬೬೯) ಅದ್ಭುತ ಎಚ್ಚಿಂಗ್‌ಗಳಲ್ಲಿ ಈ ತಂತ್ರ ಪ್ರೌಢಾವಸ್ಥೆ ಪಡೆಯಿತು. ಹದಿನೆಂಟನೇ ಶತಮಾನದ ಗಿಯೋನಾನಿ ಪಿರಾನೇಸಿ, ಗೋಯ ಇವರುಗಳಲ್ಲದೆ ನವ್ಯಕಲಾವಿದರಾದ ಇಂಪ್ರೆಷನಿಸ್ಟರು ಹಾಗೂ ಪಿಕಾಸೋ, ಮತೀಸ್, ಹೆನ್ರಿಮೂರ್‌ರವರು ಸಹ ಅನೇಕ ಉತ್ತಮ ಕೃತಿ

ರಚಿಸಿದ್ದಾರೆ.


ಭಾರತೀಯರಾದ ಕೃಷ್ಣಾರೆಡ್ಡಿ ಇಂಟಾಗ್ಲಿಯೋನಲ್ಲಿ 'ವಿಸ್ಕಾಸಿಟಿ' ಎಂಬ ಹೊಸ ತಂತ್ರವನ್ನು ಹುಟ್ಟು ಹಾಕಿದರು. ಅದಲ್ಲದೆ ಲಕ್ಷ್ಮಾಗೌಡ್, ದೇವರಾಜ್, ಡಿ. ಅನುಪಮ್‌ಸೂದ್, ಅಮಿತಾಭ್ ಬ್ಯಾನರ್ಜಿ, ಧುಮಾಲ್, ಪಳನಿಯಪ್ಪನ್, ಸೋಮನಾಥ ಹೋರೆ, ಶ್ಯಾಮ್ ಸುಂದರ್, ಜಯ್‌ಕುಮಾರ್, ಚಂದ್ರನಾಥ್ ಆಚಾರ್ಯ, ಸಿ. ಚಂದ್ರಶೇಖರ್ ಇವರುಗಳೂ ಸಹ ಉತ್ತಮ ಎಚ್ಚಿಂಗ್‌ಗಳನ್ನು ರಚಿಸಿದ್ದಾರೆ.

ಎಚ್ಚಿಂಗ್ ತಂತ್ರ


ಎಚ್ಚಿಂಗ್‌ನಲ್ಲಿ ಎನ್‌ಗ್ರೇವಿಂಗ್‌ನಂತಲ್ಲದೆ ಗೆರೆಗಳನ್ನು ಕೊರೆಯಲು ಆಮ್ಲದ (ನೈಟ್ರಿಕ್, ಫೆರ್ರಿಕ್ ಕ್ಲೋರೈಡ್, ಕಾಪರ್ ನೈಟ್ರೇಟ್ ಇತ್ಯಾದಿ ಆಮ್ಲಗಳು) ಅವಶ್ಯಕತೆಯಿದೆ. ಆಮ್ಲ ನಿರೋಧಕ ಕವಚವೊಂದನ್ನು ತಾಮ್ರ ಅಥವಾ ಸತುವಿನ ಪ್ಲೇಟ್‌ನ ಮೇಲೆ ಹರಡಲಾಗುತ್ತದೆ. ಈ ಕವಚ ಮೃದು ಅಥವಾ ಗಟ್ಟಿಯಾಗಿ ಇರಬಹುದು. ಇದನ್ನು ಗ್ರೌಂಡ್ ಎನ್ನುತ್ತಾರೆ. ಈ ಗ್ರೌಂಡನ್ನು ಜೇನುಮೇಣ, ಬಿಟುಮಿನ್ ಮತ್ತು ರೆಸಿನ್‌ಗಳ ೨ : ೧ : ೧ ಪ್ರಮಾಣದಲ್ಲಿ ತಯಾರಿಸಲಾಗುತ್ತದೆ. ಲೋಹದ ಹಾಳೆಯ ಹಿಂಬದಿ ಮತ್ತು ಪಕ್ಕೆಲಗಳನ್ನು ವಾರ್ನಿಷ್ ಅಥವಾ ಶೆಲ್ಲಾಕ್ ಬಳಸಿ ಆಮ್ಲದಿಂದ ಕೊರೆಯದಂತೆ ಕಾಪಾಡಲಾಗುತ್ತದೆ.



ಚೂಪಾದ ಮೊನೆಯಿರುವ ಉಪಕರಣದಿಂದ ಚಿತ್ರವನ್ನು ಕಲಾವಿದ ಗ್ರೌಂಡ್ ಮೇಲೆ ಗೀಚುತ್ತಾನೆ. ಹೀಗೆ ಗೀಚಿದ ಜಾಗಗಳಲ್ಲಿ ಆಮ್ಲ ನಿರೋಧಕ ಕವಚವು ಕಿತ್ತು ಬಂದು, ನಂತರ ಆ ಪ್ಲೇಟನ್ನು ನೈಟ್ರಿಕ್ ಆಮ್ಲದಲ್ಲಿ ಅದ್ದಿದಾಗ – ಗೀಚಿದ ಜಾಗವು ತೆರೆದಿರುವುದರಿಂದ ಆಮ್ಲವು ಕೊರೆಯುತ್ತದೆ. ಆಮ್ಲದ ಸಾಮರ್ಥ್ಯ ಹಾಗೂ ಕೊರೆಯಲು ಬಿಟ್ಟ ಸಮಯ ಇವೆರಡನ್ನೂ ಅವಲಂಬಿಸಿ ರೇಖೆಗಳು ಒರಟಾಗಿಯೋ, ಸಪೂರವಾಗಿಯೋ ಉಂಟಾಗುತ್ತವೆ. ಇದಾದ ನಂತರ ಯಾವುದೇ ತಿದ್ದುಪಾಟುಗಳು ಇದ್ದಲ್ಲಿ ಸ್ಕ್ರೇಪರ್ ಮತ್ತು ಬರ್ನಿಷರ್‌ಗಳನ್ನು ಬಳಸಿ ಬದಲಾವಣೆ ಮಾಡಬಹುದು. ಕಲಾವಿದನ ಅವಶ್ಯಕತೆಗೆ ಅನುಗುಣವಾಗಿ ಪ್ಲೇಟ್ ತಯಾರಾದ ನಂತರ ಪ್ಲೇಟನ್ನು ತೊಳೆದು ಇಂಕನ್ನು ಹಚ್ಚಿ ತುಂಬಿ ಮುದ್ರಿಸಲಾಗುತ್ತದೆ.




ರೂಲೆಟ್ ಉಪಕರಣ




ಬಳಸುವ ವಿಧಾನ





ಸ್ಕ್ರೇಪರ್ ಮತ್ತು ಬರ್ನಿಷರ್




ಮೇಜೊ ಟಿಂಟ್ ತಂತ್ರ










ಎಚ್ಚಿಂಗ್ ಮುದ್ರಣ ತಂತ್ರದ ಹಂತಗಳು

ಎಚ್ಚಿಂಗ್‌ನ ಇತರ ತಂತ್ರಗಳು

ಅಕ್ವಾಟಿಂಟ್ – ಮೊದಲು ಪ್ಲೇಟಿನ ಮೇಲೆ ರೆಸಿನ್ (Resin) ಪುಡಿಯ ಸೂಕ್ಷ್ಮವಾದ ಕಣಗಳನ್ನು ಎಲ್ಲೆಡೆ ಸಮಾನವಾಗಿ ಹರಡಲಾಗುತ್ತದೆ. ನಂತರ ಪ್ಲೇಟನ್ನು ಕಾಯಿಸಿದಾಗ ರೆಸಿನ್ ಮೇಲ್ಮೈಗೆ ಅಂಟಿಕೊಳ್ಳುತ್ತದೆ. ಆಮ್ಲ ನಿರೋಧಕ ವಾರ್ನೀಷನ್ನು ಕುಂಚದಿಂದ ಬೇಕಾದ ಕಡೆಗಳಲ್ಲಿ ತುಂಬಬೇಕಾಗುತ್ತದೆ. ವಾರ್ನೀಷ್ ಹಚ್ಚದ ಜಾಗಗಳಲ್ಲಿ ಆಮ್ಲದ ಸಾಮರ್ಥ್ಯ (೧ : ೪) ಒಂದು ಭಾಗ ಆಮ್ಲ, ನಾಲ್ಕು ಭಾಗ ನೀರು ಹೀಗೆ ಅಥವಾ ೧ : ೧೦ ಎಂದು

ರೇಸಿನ್ ಕಣಗಳು ಜಿಂಕ್ ಹಾಳೆಯ ಮೇಲೆ ಕೊರುವ ರೀತಿ



ನಿರ್ಧರಿಸಲಾಗುತ್ತೆ ಮತ್ತು ಕೊರೆಯಲು ಬಿಟ್ಟ ಅವಧಿಗನುಗುಣವಾಗಿ ತಿಳಿ ಅಥವಾ ಕಡುಪು ಹೀಗೆ ವಿಧ ವಿಧ ಛಾಯೆಗಳನ್ನು ಪಡೆಯಬಹುದು. ರೇಖೆಯನ್ನು ಬಳಸದೆಯೇ ಪ್ಲೇಟ್‌ನ ವಿವಿಧ ಛಾಯೆಗಳನ್ನು ತರುವ ಈ ತಂತ್ರ ಅನುಪಮವಾದುದು.

ಸಾಫ್ಟ್ ಗ್ರೌಂಡ್ : ಸಾಫ್ಟ್ ಗ್ರೌಂಡ್ ಎಚ್ಚಿಂಗ್‌ನಲ್ಲಿ ಕ್ರೇಯಾನ್ ಅಥವಾ ಪೆನ್ಸಿಲ್ ಚಿತ್ರಣದ ಪರಿಣಾಮಗಳನ್ನು ಅನುಕರಿಸಲು ಸಾಧ್ಯ. ಹಾರ್ಡ್ ಗ್ರೌಂಡ್ ಮಿಶ್ರಣಕ್ಕೆ ಇನ್ನೂ ಅರ್ಧ ಭಾಗದಷ್ಟು ಗ್ರೀಸ್ ಅಥವಾ ವ್ಯಾಸಲೀನ್‌ಅನ್ನು ಮಿಶ್ರ ಮಾಡಿದಾಗ ಮಿದುವಾದ ಸಾಫ್ಟ್ ಗ್ರೌಂಡ್ ತಯಾರಾಗುತ್ತದೆ. ಸಾಫ್ಟ್ ಗ್ರೌಂಡನ್ನು ಲೋಹದ ಹಾಳೆಯ ಮೇಲೆ ಸವರಿಯಾದ ನಂತರ ಕಾಗದವನ್ನು ಇಟ್ಟು ಅದರ ಮೇಲೆ ಚಿತ್ರಿಸಿದಾಗ ಕಾಗದದ ಒರಟು ಮೇಲ್ಮೈ ನಂತಹ ಚಿತ್ರಣ ಪ್ಲೇಟ್‌ನ ಮೇಲೂ ಮೂಡಿರುತ್ತದೆ. ಹಲವು ಬಾರಿ ಎಚ್ಚಿಂಗ್‌ನ ಇತರ ತಂತ್ರಗಳೊಂದಿಗೆ ಇದನ್ನು ಬಳಸುತ್ತಾರೆ. ಪ್ಲೇಟ್‌ನ ಮೇಲೆ ಬಟ್ಟೆ, ತಂತಿ, ಎಲೆ ಇತ್ಯಾದಿಗಳ ಮೈವಳಿಕೆಗಳನ್ನು ವರ್ಗಾಯಿಸುವ ಅಗತ್ಯವಿದ್ದಾಗ ಸಾಫ್ಟ್‌ಗ್ರೌಂಡ್ ಉಪಯೋಗಕಾರಿ.

ಲಿಫ್ಟ್ ಗ್ರೌಂಡ್ ಅಥವಾ ಶುಗರ್ ಅಕ್ವಾಟಿಂಟ್ : ಪ್ಲೇಟ್‌ನ ಮೇಲೆ ಕುಂಚದ ಅಥವಾ ಲೇಖನಿಯ ರೇಖೆಗಳನ್ನು ತದ್ರೂಪವಾಗಿ ಪಡೆಯಬೇಕಾದಾಗ ಈ ವಿಧಾನವನ್ನು ಬಳಸುತ್ತಾರೆ. ಅರ್ಧ ಭಾಗ ಇಂಡಿಯಾ ಇಂಕ್‌ಗೆ ಇನ್ನರ್ಧ ಭಾಗ ಸಕ್ಕರೆಯನ್ನು ಬೆರೆಸಿ ಆ ಮಿಶ್ರಣದಿಂದ ಚಿತ್ರವನ್ನು ಪ್ಲೇಟ್‌ನ ಮೇಲೆ ಬಿಡಿಸಲಾಗುತ್ತದೆ. ಇದು ಒಣಗಿಯಾದ ನಂತರ ಲಿಕ್ವಿಡ್ ಗ್ರೌಂಡನ್ನು ಅದರ ಮೇಲೆ ಹಚ್ಚಲಾಗುತ್ತದೆ. ನಂತರ ಪ್ಲೇಟನ್ನು ಬಿಸಿಯಾದ ನೀರಿನಲ್ಲಿ ಅದ್ದಿದಾಗ ಸಕ್ಕರೆ ಕರಗಿ ಚಿತ್ರಿತ ಭಾಗವು ತೆರೆದುಕೊಳ್ಳುತ್ತದೆ. ನಂತರ ಅದರ ಮೇಲೆ ಅಕ್ವಾಟಿಂಟ್ ತಂತ್ರವನ್ನು ಉಪಯೋಗಿಸಲಾಗುತ್ತದೆ.

ವಿಸ್ಕಾಸಿಟಿ ತಂತ್ರ : ಈ ತಂತ್ರದಲ್ಲಿ ಪ್ಲೇಟಿನ ತಯಾರಿಯ ಅನೇಕ ಮಟ್ಟಗಳು ಇರುವಂತೆ ಕೃತಿಯನ್ನು ರಚಿಸಲಾಗುತ್ತದೆ. ಮುದ್ರಣದ ಸಮಯದಲ್ಲಿ ಆಳದಲ್ಲಿರುವ ಗೆರೆಗಳಲ್ಲಿ ಇಂಕನ್ನು ತುಂಬಿಯಾದ ನಂತರ, ಪ್ಲೇಟನ್ನು ಒರೆಸಿ ರೋಲರ್‌ಗಳಿಂದ ಬಣ್ಣವನ್ನು ಹಚ್ಚಲಾಗುತ್ತದೆ. ಇದರಲ್ಲಿ ಮೂರು ಬಗೆಯ ಗಟ್ಟಿ, ಮಧ್ಯಮ ಗಟ್ಟಿ ಹಾಗೂ ಮೃದು ರೋಲರ್‌ಗಳನ್ನು ಬಳಸಲಾಗುತ್ತದೆ. ಮೃದುವಾದ ರೋಲರ್‌ನಿಂದ ಹರಡಿದ ಬಣ್ಣವು ಪ್ಲೇಟಿನ ಕೆಳಮಟ್ಟದವರೆಗೂ

ತಲುಪಿದರೆ, ಗಟ್ಟಿಯಾದ ರೋಲರ್ ಮೇಲ್ಮಟ್ಟದಲ್ಲಿ ಮಾತ್ರ ಬಣ್ಣವನ್ನು ಹಚ್ಚುತ್ತದೆ. ಜೊತೆಗೆ ಮೂರು ರೋಲರ್‌ಗಳಲ್ಲಿ ಬಳಸುವ ಇಂಕ್‌ಗಳ ಜಿಗುಟುತನವನ್ನು ವ್ಯತ್ಯಾಸ ಮಾಡುವುದರಿಂದ (ಜಿಗುಟಾದ ಇಂಕ್, ತೆಳುವಾದ ಇತರ ಇಂಕನ್ನು ತನ್ನಡೆಗೆ ಸೆಳೆದುಕೊಳ್ಳುತ್ತದೆ) ಇನ್ನಷ್ಟು ವಿಶೇಷ ಬಣ್ಣದ ಪರಿಣಾಮಗಳು ದೊರಕುತ್ತವೆ. ಒಂದೇ ಪ್ಲೇಟಿನಿಂದ ಅನೇಕ ವರ್ಣಗಳ ಪ್ರತಿಯನ್ನು ತೆಗೆಯಬಹುದಾದ ಈ ವಿಶೇಷ ವಿಧಾನದಲ್ಲಿ ಪ್ಲೇಟ್ ರಚಿಸುವಾಗ ಎಲ್ಲಿ ಯಾವ ಮಟ್ಟವಿರಬೇಕು, ರೋಲರ್‌ಗಳನ್ನು ಬಳಸುವಾಗ ಯಾವ ರೋಲರನ್ನು ಎಲ್ಲಿ ಯಾವ ಬಣ್ಣದೊಂದಿಗೆ ಬಳಸಬೇಕು ಎಂದು ಕಲಾವಿದ ತನ್ನ ಸ್ವಾನುಭವದಿಂದಲೇ ನಿರ್ಧರಿಸಬೇಕು.

ಲಿಥೋಗ್ರಾಫಿ ಮುದ್ರಣ

ಲಿಥೋಗ್ರಾಫಿಯ ಶೋಧನೆ ಮತ್ತು ಸುಧಾರಣೆ ಆದದ್ದು ೧೮ನೇ ಶತಮಾನದ ಅಂತ್ಯದಲ್ಲಿ. ಶೋಧಕ ಎ. ಸೆನೆಫೀಲ್ಡರ್ (೧೭೭೧–೧೮೩೪) ತನ್ನ ಮ್ಯೂನಿಚ್‌ನಲ್ಲಿನ ಸಂಶೋಧನಾ ಕೇಂದ್ರದಲ್ಲಿ ಇದನ್ನು ಸಾಧಿಸಿದ. ಅವನ ಶೋಧನೆಗಳು ಎಷ್ಟು ಮೌಲಿಕವಾದದ್ದೆಂದರೆ ೧೫೦ ವರ್ಷಗಳ ನಂತರವೂ ಅವನು ಬರೆದ ಪುಸ್ತಕ ಪಠ್ಯಪುಸ್ತಕ ಎನಿಸುವಷ್ಟು ಆಕರ ಗ್ರಂಥವಾಗಿದೆ. ಸೆನೆಫೀಲ್ಡರ್ ಸ್ವತಃ ಕಲಾವಿದನಾಗಿರಲಿಲ್ಲ. ಬಹುಬೇಗ ಇಂಗ್ರೆ, ಗೋಯ, ಡೆಲಕ್ರಸನಂತಹ ಕಲಾವಿದರು ಈ ಮಾಧ್ಯಮವನ್ನು ಅಳವಡಿಸಿಕೊಂಡರು. ರೇಖಾಚಿತ್ರಣಕ್ಕೆ ಹತ್ತಿರವಾಗುವ ಪರಿಣಾಮಗಳು ಸಾಧ್ಯವಾಗುವ ಲಿಥೋಗ್ರಾಫಿ – ಮಾನೆ, ಸ್ಯೂರ, ಡೆಗಾನಂತಹ ಕಲಾವಿದರನ್ನು ಸೆಳೆಯಿತು. ಟೂಲೂಸ್ ಲಾತ್ರೆ ಆಕರ್ಷಕವಾದ ಬಣ್ಣದ ಪೋಸ್ಟರ್‌ಗಳನ್ನು ಸೃಷ್ಟಿಸಿದರೆ, ಕ್ವಾತೆ ಕೋಲ್‌ವಿಟ್ಜ್ ಗಾಢವಾದ ಕಪ್ಪು ಬಿಳುಪಿನ ಪ್ರಿಂಟ್‌ಗಳನ್ನು ರಚಿಸಿದರು. ಇತ್ತೀಚಿನ ದಶಕಗಳಲ್ಲಿ ಡೇವಿಡ್ ಹಾಕ್ನೆ ಹಾಗೂ ಪೀಟರ್ ಬ್ಲೇಕ್‌ರ ಕೃತಿಗಳು ಗಮನೀಯ. ಭಾರತೀಯ ಕಲಾವಿದರಾದ ಸೋಮನಾಥ್ ಹೋರೆ, ಲಾಲೂ ಪ್ರಸಾದ್ ಷಾ, ಶಕ್ತಿ ಬರ್ಮನ್, ಮನಸಾರಾಮ್ ಇವರ ಕೃತಿಗಳನ್ನು ಇಲ್ಲಿ ಹೆಸರಿಸಬಹುದು.

ಲಿಥೋಗ್ರಾಫಿ ತಂತ್ರ : ನೀರು ಮತ್ತು ಎಣ್ಣೆ ಮಿಶ್ರಣಗೊಳ್ಳಲಾರದು ಎಂಬ ತಂತ್ರವನ್ನು ಅನುಸರಿಸಿದ ವಿಧಾನವಿದು. ಈ ಮುದ್ರಣ ತಂತ್ರದಲ್ಲಿ ನೀರು ಮತ್ತು ಗ್ರೀಸ್‌ನ ನಡುವಣ ವೈರುಧ್ಯವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಲಿಥೋದಲ್ಲಿ ವಿಶೇಷವೆಂದರೆ ಮುದ್ರಣವಾಗಬೇಕಾದ ಚಿತ್ರ ಹಾಗೂ ಮುದ್ರಣವಾಗದ ಇತರ ಭಾಗಗಳು ಸಹ ಒಂದೇ ಸಮತಲದಲ್ಲಿರುತ್ತವೆ. ಚಿತ್ರವನ್ನು ಗ್ರೀಸ್ ಅಂಶವಿರುವ ಕ್ರೇಯಾನ್ ಅಥವಾ ಇಂಕ್‌ನಿಂದ ರಚಿಸುವುದರಿಂದ ಅದು ಮುದ್ರಣ ಶಾಯಿಯನ್ನು ಸಹಜವಾಗಿಯೇ ಆಕರ್ಷಿಸುತ್ತದೆ. ಮಿಕ್ಕಿದ ಭಾಗಗಳು ನೀರನ್ನು ಆಕರ್ಷಿಸುವುದರಿಂದ ಅಲ್ಲಿ ಇಂಕ್ ಕೂರುವುದಿಲ್ಲ.

ಚಿತ್ರಣವಾದ ನಂತರ ಕಲ್ಲಿನ ಮೇಲೆ ಅರೇಬಿಯದ ಅಂಟನ್ನು ಸವರಿ ಹತ್ತು ಹನ್ನೆರಡು ಗಂಟೆಗಳ ಕಾಲ ಬಿಡಲಾಗುತ್ತದೆ. ಆಗ ಅಂಟು ಚಿತ್ರವಿಲ್ಲದಿರುವ ಭಾಗಗಳಲ್ಲಿ ನೀರನ್ನು ಹಿಡಿದುಕೊಳ್ಳಲು ಸಹಾಯ ಮಾಡುತ್ತದೆ. ಮುದ್ರಣಕ್ಕೆ ಮುಂಚೆ ಇಡೀ ಕಲ್ಲನ್ನು ನೀರಿನಿಂದ ತೇವ ಮಾಡಲಾಗುತ್ತದೆ. ಹೀಗೆ ತೇವವಾದ ಕಲ್ಲಿನ ಮೇಲೆ ರೋಲರ್‌ನಿಂದ ಇಂಕನ್ನು ಹಚ್ಚಿದಾಗ, ತೇವವಿರುವ ಜಾಗದಲ್ಲಿ ಇಂಕ್ ಅಂಟದೆ ಬರೀ ಚಿತ್ರಿತ ಭಾಗದಲ್ಲಿ ಮಾತ್ರ ಇಂಕ್ ಹತ್ತಿಕೊಳ್ಳುತ್ತದೆ. ನಂತರ ಅದರ ಮೇಲೆ ಕಾಗದವನ್ನು ಇಟ್ಟು ಕಲ್ಲು ಮತ್ತು ಕಾಗದ ಎರಡನ್ನೂ

ಒಟ್ಟಿಗೆ ಲಿಥೋ ಮುದ್ರಣ ಯಂತ್ರದಲ್ಲಿ ಹಾಯಿಸಲಾಗುತ್ತದೆ. ಯಂತ್ರದಲ್ಲಿ ಸ್ಕ್ರೇಪರ್‌ನಿಂದ ಒತ್ತಡ ಬಿದ್ದಾಗ ಇಂಕ್ ಕಲ್ಲಿನಿಂದ ಕಾಗದಕ್ಕೆ ವರ್ಗಾವಣೆಯಾಗುತ್ತದೆ.

ಲಿಥೋದಲ್ಲಿ ಒಂದಕ್ಕಿಂತ ಹೆಚ್ಚು ವರ್ಣವಿರುವ ಪ್ರತಿಗಳನ್ನು ತೆಗೆಯಬೇಕೆಂದರೆ ಅಷ್ಟು ವರ್ಣಗಳಿಗೆ ಒಂದೊಂದು ಕಲ್ಲಿನ ಮೇಲೆ ಆಯಾ ವರ್ಣದ ಚಿತ್ರದ ಭಾಗ ರಚಿಸಿ, ಮೊದಲು ಒಂದು ವರ್ಣದ ಮುದ್ರಣವಾದ ನಂತರ ಅದನ್ನೂ ಒಣಗಲು ಬಿಟ್ಟು ಮುಂದಿನ ವರ್ಣವನ್ನು ಮುದ್ರಿಸಬೇಕು. ಇದಲ್ಲದೆ ಒಂದೇ ಕಲ್ಲಿನಲ್ಲಿ ಅನೇಕ ಘಟ್ಟಗಳಲ್ಲಿ ವಿವಿಧ ವರ್ಣಗಳನ್ನು ಮುದ್ರಿಸುವ ಪದ್ಧತಿಯೂ ಇದೆ.


ಟ್ರಾನ್ಸ್‌ಫರ್ ಲಿಥೋಗ್ರಾಫಿ : ನೇರವಾಗಿ ಕಲ್ಲಿನ ಮೇಲೆ ಚಿತ್ರ ಬಿಡಿಸುವ ಪದ್ಧತಿಗೆ ಇದು ವಿರುದ್ಧ. ಟ್ರಾನ್ಸ್‌ಫರ್ ಪೇಪರ್ ಎಂಬ ವಿಶೇಷ ಕಾಗದದ ಮೇಲೆ ಮೊದಲು ಚಿತ್ರ ಬರೆದು ನಂತರ ಅದನ್ನು ಯಂತ್ರದ ಒತ್ತಡದ ಸಹಾಯದಿಂದ ಕಲ್ಲಿನ ಮೇಲೆ ವರ್ಗಾಯಿಸಲಾಗುತ್ತದೆ. ಟ್ರಾನ್ಸ್‌ಫರ್ ಕಾಗದದ ಮೇಲೆ ನೀಡಿರುವ ವಿಶೇಷ ಪದರ ನೀರಿನಲ್ಲಿ ಕರಗುವ ಗುಣ ಹೊಂದಿರುವುದರಿಂದ ಈ ತಂತ್ರ ಸಾಧ್ಯವಾಗುತ್ತದೆ.

ಫೋಟೋ ಲಿಥೋಗ್ರಾಫಿ : ಛಾಯಾಚಿತ್ರ ತಂತ್ರವನ್ನು ಉಪಯೋಗಿಸಿ ಈಗಾಗಲೇ ರಚಿಸಿರುವ ಚಿತ್ರವನ್ನೋ, ಛಾಯಾಚಿತ್ರವನ್ನೋ ಕಲ್ಲಿನ ಮೇಲೆ ವರ್ಗಾಯಿಸುವ ಈ ಪದ್ಧತಿ ಈಗ ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಬಳಕೆಯಲ್ಲಿದೆ.

ಲಿಥೋಗ್ರಾಫಿ ಆರಂಭವಾದಾಗ ಯೂರೋಪಿನ ಬವಾರಿಯಾದಿಂದ ಅಗೆದ ವಿಶೇಷ ಸುಣ್ಣಕಲ್ಲನ್ನು ಮಾತ್ರ ಬಳಸುತ್ತಿದ್ದರು. ಇದು ಸಾಂಪ್ರದಾಯಿಕ ತಂತ್ರ. ಇದಲ್ಲದೆ ಇತ್ತೀಚೆಗೆ ಅಳತೆಗೆ ನಿಖರವಾಗಿ ಒರಟುಗೊಳಿಸಲ್ಪಟ್ಟ ಸತು (Zinc) ಅಥವಾ ಅಲ್ಯುಮಿನಿಯಂ ಹಾಳೆಗಳ ಮೇಲೆಯೂ ಲಿಥೋ ತಂತ್ರವನ್ನು ಬಳಸಬಹುದು. ಆಗ ಅದನ್ನು ಅಲ್ಯೂಮಿನಾಗ್ರಾಫಿ ಎನ್ನುತ್ತಾರೆ. ಲಿಥೋದ ಮುಂದುವರೆದ ತಂತ್ರವೇ ಇಂದಿನ ಹೆಚ್ಚು ಮೊತ್ತದ ಮುದ್ರಣಗಳು ನಡೆಯುವ ಆಫ್‌ಸೆಟ್ (Offset) ತಂತ್ರ. ಆಫ್‌ಸೆಟ್‌ನಲ್ಲೂ ಸಹ ನೀರು ಮತ್ತು ಗ್ರೀಸ್ ನಡುವಣ ವೈರುಧ್ಯವೇ ಬಂಡವಾಳ.

ಸೆರಿಗ್ರಾಫಿ

ಜನಪ್ರಿಯವಾಗಿ ಸ್ಕ್ರೀನ್ ಪ್ರಿಂಟಿಂಗ್ ಎಂದು ಕರೆಸಿಕೊಳ್ಳುವ ಈ ಮಾಧ್ಯಮ ೧೯೩೦ರ ದಶಕದ ಶೋಧನೆ. ಇದರ ಮೂಲ ರೂಪವಾದ ಸ್ಟೆನ್ಸಿಲ್ ಪ್ರಿಂಟಿಂಗ್ ಶತಮಾನಗಳ ಹಿಂದೆಯೇ ಚೀನ, ಜಪಾನುಗಳಲ್ಲಿ ಚಾಲ್ತಿಯಲ್ಲಿತ್ತು. ಕಾಗದದಲ್ಲಿ ಮುದ್ರಣವಾಗಬೇಕಾದ ಭಾಗವನ್ನು ಮಾತ್ರ ಮೊದಲು ಕತ್ತರಿಸಲಾಗುತ್ತದೆ. ಹಾಗೆ ತೆರಪಾದ ಜಾಗದಲ್ಲಿ ಮಾತ್ರ ಇಂಕ್ ಹಾದು ಮುದ್ರಣವಾಗುತ್ತದೆ. ಇದು ಸರಳವಾದ ಸ್ಟೆನ್ಸಿಲ್ ತಂತ್ರ.





ನವೀನವಾದ ಇದರ ತಂತ್ರವನ್ನು ಕಾರ್ಲ್ ಜಿಗ್ರೋಪರ್ ಎಂಬುವನು ಸೃಷ್ಟಿಸಿದ. ಬಿಂಬವನ್ನು ಹೊಂದಿದ ಸ್ಟೆನ್ಸಿಲ್‌ಅನ್ನು ಜಾಲರಿಯಂತಹ ರೇಷಿಮೆ ಅಥವಾ ನೈಲಾನ್ ಬಟ್ಟೆಯ ಮೇಲೆ ಅಂಟಿಸಲಾಗುತ್ತದೆ. ಸ್ಟೆನ್ಸಿಲ್‌ನಲ್ಲಿ ತೆರಪಾಗಿರುವ ಜಾಗದ ಮೂಲಕ ಬಣ್ಣ ಹಾಯ್ದು ಕೆಳಗಿರುವ ಕಾಗದದ ಮೇಲೆ ಮುದ್ರಣವಾಗುತ್ತದೆ. ಬಣ್ಣವನ್ನು ಜಾಲರಿ ಮೂಲಕ ತಳ್ಳಲು ಸ್ಕ್ವೀಜಿ ಎಂಬ ರಬ್ಬರಿನ ತುಂಡನ್ನು ಬಳಸಲಾಗುತ್ತದೆ. ಈ ಮಾಧ್ಯಮದ ಇನ್ನೊಂದು ವಿಶೇಷವೆಂದರೆ ಇದನ್ನು ಯಾವುದೇ ವಸ್ತುವಿನ ಮೇಲೆ–ಗಾಜು, ಬಟ್ಟೆ, ಪ್ಲಾಸ್ಟಿಕ್ ಇತ್ಯಾದಿ ಅಥವಾ ಯಾವುದೇ ಆಕಾರವಿರುವ – ಗೋಲಾಕಾರ, ಉಬ್ಬಿದ ಮೇಲ್ಮೈ ಮೇಲೆ ಸಹ ಮುದ್ರಿಸಬಹುದು. ಈ

ಮಾಧ್ಯಮದಲ್ಲೂ ಸಹ ಛಾಯಾಚಿತ್ರ ತಂತ್ರದಿಂದ ಈಗಾಗಲೇ ತಯಾರಾದ ಚಿತ್ರ ಅಥವಾ ಛಾಯಾಚಿತ್ರಗಳನ್ನು ಸ್ಟೆನ್ಸಿಲ್ ಮೇಲೆ ವರ್ಗಾಯಿಸಬಹುದು. ವಾಣಿಜ್ಯ ಮುದ್ರಣದ ಇದೇ ತಂತ್ರವನ್ನು ಗ್ರಾಫಿಕ್ ಕಲೆಯಲ್ಲಿ ಕಲಾಕೃತಿಗಳ ಸೃಷ್ಟಿಗಾಗಿ ಬಳಸಿಕೊಳ್ಳಲಾಗುತ್ತದೆ.

೬೦ನೇ ದಶಕದ ಪಾಪ್ ಕಲಾವಿದರು ಸೆರಿಗ್ರಾಫಿ ಮಾಧ್ಯಮವನ್ನು ಶಕ್ತಿಯುತವಾಗಿ ಬಳಸಿಕೊಂಡರು. ಆಂಡಿ ವರೋಲ್, ರಾಯ್ ಲಿಚ್‌ಟನ್ ಸ್ಟೀನ್, ಪೀಟರ್ ಬ್ಲೇಕ್ ಇವರಲ್ಲಿ ಪ್ರಮುಖರು. ಜ್ಯೋತಿಭಟ್, ವಿ. ಎಸ್. ಪಟೇಲ್, ಕೆ. ಜಿ. ಸುಬ್ರಮಣ್ಯನ್, ಜಯ್ ಝರೋಟಿಯಾ ಮುಂತಾದ ಭಾರತೀಯ ಕಲಾವಿದರು ಈ ತಂತ್ರದಲ್ಲಿ ಅತ್ಯುತ್ತಮ ಕೃತಿಗಳನ್ನು ರಚಿಸಿದ್ದಾರೆ.

ಭಾರತದಲ್ಲಿ ಮುದ್ರಣಕಲೆ

ಪ್ರಿಂಟ್‌ಮೇಕಿಂಗ್ ಪ್ರಚಲಿತವಿದ್ದ ಯೂರೋಪಿನಿಂದ ಗ್ರಾಫಿಕ್ ಭಾರತಕ್ಕೆ ಬಂದಿದ್ದು ೧೫೫೬ರಲ್ಲಿ. ಗೋವಾಕ್ಕೆ ಬಂದ ಕ್ರಿಶ್ಚಿಯನ್ ಮಿಷನರಿಗಳು ತಮ್ಮ ಮತಾಂತರ ಕಾರ್ಯಕ್ಕೆ ಪ್ರಿಂಟಿಂಗ್ ಮಾಡಿದ ಸಾಂದರ್ಭಿಕ ಚಿತ್ರಗಳನ್ನು, ಪುಸ್ತಕಗಳನ್ನು ಬಳಸಿದರು. ನಂತರದ ದಶಕಗಳಲ್ಲಿ ಅದು ಭಾರತದ ಅನೇಕ ಕಡೆಗಳಲ್ಲಿ ಬಳಕೆಗೆ ಬಂತು.

ನಂತರ ಬ್ರಿಟಿಷರು ಭಾರತದ ಆಳ್ವಿಕೆ ಆರಂಭಿಸಿದಾಗಿನಿಂದ ಧಾರ್ಮಿಕ ಪ್ರಚಾರಕ್ಕೂ ಮೀರಿದ ಕೆಲಸಕ್ಕೆ ಪ್ರಿಂಟ್‌ಮೇಕಿಂಗ್ ಬಳಕೆಯಾಯ್ತು. 'ಕಂಪೆನಿ ಕಲೆ' ಎಂದು ಕರೆಸಿಕೊಳ್ಳಲ್ಪಡುವ ಶೈಲಿಯ ಈ ಕೃತಿಗಳಲ್ಲಿ ಭಾರತದ ವಿಶಿಷ್ಟ ದೃಶ್ಯಗಳನ್ನು, ಪ್ರವಾಸಿ ಸ್ಥಳಗಳನ್ನು ಹಾಗೂ ಭಾರತೀಯ ಜನಜೀವನದ ತುಣುಕುಗಳನ್ನು ದಾಖಲಿಸಲು ಪ್ರಿಂಟ್‌ಮೇಕಿಂಗ್ ಬಳಕೆಯಾಯ್ತು.

ಬ್ರಿಟಿಷರು ಭಾರತದ ಕಲೆಯನ್ನು ಉದ್ಧರಿಸಲೆಂದು ಆರಂಭಿಸಿದ ಕಲ್ಕತ್ತಾ, ಮದ್ರಾಸ್, ಬೊಂಬಾಯಿ ಮತ್ತು ಲಕ್ನೋ ಸರ್ಕಾರಿ ಕಲಾ ಕಾಲೇಜುಗಳಲ್ಲಿ ಪ್ರಿಂಟ್ ಮೇಕಿಂಗ್‌ಗೆ ಅಂತಹ ಪ್ರಾಶಸ್ತ್ಯವಿರಲಿಲ್ಲ. ಆದರೆ ಶಾಂತಿನಿಕೇತನದ ಕಲಾಭವನದಲ್ಲಿ ಪ್ರಿಂಟ್ ಮೇಕಿಂಗ್ ಮಾಧ್ಯಮಕ್ಕೆ ಪ್ರಾಮುಖ್ಯತೆ ತಕ್ಕ ಮಟ್ಟಿಗೆ ದೊರೆತುದರಿಂದ ಈ ಕಲಾಶಾಲೆ ಬಹಳ ದಶಕಗಳ ವರೆಗೆ ಗ್ರಾಫಿಕ್ ಚಟುವಟಿಕೆಯ ಕೇಂದ್ರವಾಯಿತು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗ್ರಾಫಿಕ್ ರಾಷ್ಟ್ರೀಯ ಮಟ್ಟದ ಜಾಗೃತಿ, ಜನಮನ್ನಣೆಗಳಿಸಲು ೧೯೭೦ರ ವರೆಗೆ ಕಾಯಬೇಕಾಯಿತು. ಅಮೆರಿಕದ ಪ್ರಿಂಟ್ ಮೇಕರ್‌ರಾದ ಪಾಲ್ ಲಿಂಗ್ರನ್‌ರವರು ೧೯೭೦ರಲ್ಲಿ ನಡೆಸಿದ 'ಗಡಿ' ಗ್ರಾಫಿಕ್ ಕಾರ್ಯಾಗಾರ ಹೆಗ್ಗುರುತೆಂದು ಭಾವಿಸಬಹುದು. ಈ ಕಾರ್ಯಾಗಾರದಲ್ಲಿ ದೇಶದ ಅನೇಕ ಭಾಗಗಳಿಂದ ಬಂದ ಕಲಾವಿದರು ಭಾಗವಹಿಸಿದ್ದು ಗ್ರಾಫಿಕ್ ಹೆಚ್ಚು ಪ್ರಚಲಿತವಾಗಲು ಕಾರಣವಾಯ್ತು. ಅದಾದನಂತರ ದೇಶದ ಅನೇಕ ಕಲಾ ಕಾಲೇಜುಗಳಲ್ಲಿ ಪ್ರಿಂಟ್ ಮೇಕಿಂಗ್ ವಿಭಾಗಗಳು ತೆರೆಯಲ್ಪಟ್ಟು ಹೆಚ್ಚು ಹೆಚ್ಚು ಜನ ಪ್ರಿಂಟ್‌ಮೇಕಿಂಗನ್ನು ಒಂದು ಗಂಭೀರ ಮಾಧ್ಯಮವಾಗಿ ಅಭ್ಯಸಿಸಲು ಸಾಧ್ಯವಾಯಿತು.

ಅಷ್ಟೇ ಅಲ್ಲ, ಕೇಂದ್ರ ಲಲಿತಕಲಾ ಅಕಾಡೆಮಿ ರೀಜನಲ್ ಕೇಂದ್ರಗಳಲ್ಲೂ ಗ್ರಾಫಿಕ್ ವಿಭಾಗಗಳು ಆರಂಭವಾದವು. ಜೊತೆಗೇ ಪ್ರಿಂಟ್ ಮೇಕರ್‌ಗಳ ಸಣ್ಣ ಸಣ್ಣ ಗುಂಪುಗಳು

ದೆಹಲಿ, ಕಲ್ಕತ್ತ, ಬೆಂಗಳೂರು, ಹೈದರಾಬಾದ್, ಮದ್ರಾಸ್‌ಗಳಲ್ಲಿ ಸಕ್ರಿಯವಾದುವು. ಹಲವಾರು ಪ್ರಿಂಟ್‌ಮೇಕರ್‌ಗಳು ವಿದೇಶಿ ಕಲಾಶಾಲೆಗಳಲ್ಲಿ ಕಲಿತು ಪ್ಯಾರಿಸ್, ನ್ಯೂಯಾರ್ಕ್ ಮುಂತಾದೆಡೆ ನೆಲೆಸಿದರು.

ಕೃಷ್ಣಾರೆಡ್ಡಿ, ಶಕ್ತಿ ಬರ್ಮನ್, ಮನಸಾರಾಮ್ ಇವರುಗಳು ಭಾರತದ ಹೊರಗುಳಿದರೆ ಲಕ್ಷ್ಮಾಗೌಡ, ಸನತ್‌ಕರ್, ಸೋಮನಾಥ ಹೋರೆ, ಜ್ಯೋತಿಭಟ್, ಅನುಪಮ್ ಸೂದ್, ರಿನಿ ಧುಮಾಲ್, ಧುಮಾಲ್ ಪಿ.ಡಿ., ಜಯ್ ಝುರೋಟಿಯ, ಅಮಿತಾಭ್ ಬ್ಯಾನರ್ಜಿ, ದೇವರಾಜ್, ಪಿನಾಕಿ ಬರೂವ ಮುಂತಾದ ಭಾರತದಲ್ಲೇ ಸಕ್ರಿಯರಾಗಿರುವ ಅನೇಕ ಪ್ರಿಂಟ್‌ಮೇಕರ್‌ಗಳನ್ನು ಇಲ್ಲಿ ದಾಖಲಿಸಬಹುದು.

ಕರ್ನಾಟಕದಲ್ಲಿ ಗ್ರಾಫಿಕ್ ಚಟುವಟಿಕೆ ತೀವ್ರವಾದದ್ದು ೧೯೭೯ರಿಂದ ಈಚೆಗೆ, ಹೆಬ್ಬಾರರು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿ ಶಾಂತಿನಿಕೇತನ, ಬರೋಡದ ಕಲಾಶಾಲೆಗಳಲ್ಲಿ ಕಲಿತು ಬರಲು ಯುವ ಕಲಾವಿದರನ್ನು ಕಳುಹಿಸಿದಾಗಿನಿಂದ. ಇದಕ್ಕೆ ಅಪವಾದವೆಂದರೆ ೧೯೩೪ರಲ್ಲೇ ಜರ್ಮನಿಯಲ್ಲಿ ಕೆಲಕಾಲ ಇದ್ದು ಅಲ್ಲಿನ 'ಗ್ರಾಫಿಕ್ ಸೊಸೈಟಿ ಆಫ್ ಆರ್ಟ್'ನ ಗೌರವ ಸದಸ್ಯರಾದ ಎನ್. ಜೆ. ಪಾವಂಜೆ ಮತ್ತು ೧೯೩೯ರಲ್ಲಿ ಇಂಗ್ಲೆಂಡಿನಲ್ಲಿ ಗ್ರಾಫಿಕ್ ಅಭ್ಯಸಿಸಿದ ಮಿಣಜಗಿಯವರು. ಆದರೆ ಇವರೀರ್ವರು ಮರಳಿಬಂದ ನಂತರ ಕರ್ನಾಟಕದಲ್ಲಿ ಈ ಮಾಧ್ಯಮವನ್ನು ಮುಂದುವರೆಸಲು ಬೇಕಾದ ಸವಲತ್ತುಗಳಿಲ್ಲದ್ದರಿಂದ ಅವರ ಅನುಭವ ನಮಗೆ ಆಗಿನಿಂದಲೇ ದಕ್ಕದೇ ಹೋದದ್ದು ಶೋಚನೀಯ.

ಹೆಬ್ಬಾರರು ಕಳುಹಿಸಿದ ಮೊದಲ ತಂಡದ ಸಿ. ಚಂದ್ರಶೇಖರ್, ಚಂದ್ರನಾಥ ಆಚಾರ್ಯ ೧೯೮೦–೧೯೮೧ರಲ್ಲಿ ಮರಳಿ ಬಂದರು. ಅದೇ ವೇಳೆಗೆ ದೆಹಲಿಯ ಗಡಿ ಸ್ಟುಡಿಯೋದಲ್ಲಿ ಯೂಸುಫ್ ಅರಕ್ಕಲ್ ೧೯೮೦ರಲ್ಲೂ, ಚಿ.ಸು. ಕೃಷ್ಣ ಸೆಟ್ಟಿಯವರು ೧೯೮೨ರಲ್ಲೂ ಪ್ರಿಂಟ್ ಮೇಕಿಂಗ್ ಅಭ್ಯಸಿಸಿದರು.

ನಂತರದ ದಿನಗಳಲ್ಲಿ ಚಿತ್ರಕಲಾ ಪರಿಷತ್ತು, ಕೆನ್ ಕಲಾ ಶಾಲೆ, ಇತ್ತೀಚೆಗೆ ಮೈಸೂರಿನ ಕಾವಾ, ಗುಲ್ಬರ್ಗ, ಬಿಜಾಪುರ, ದಾವಣಗೆರೆಗಳಲ್ಲೂ ಗ್ರಾಫಿಕ್ ವಿಭಾಗಗಳು ಸಜ್ಜುಗೊಂಡಿವೆ. ಬರೋಡ, ಶಾಂತಿನಿಕೇತನಗಳಲ್ಲಿ ಹಲವರು ಕಲಿತು ಬಂದರೆ, ಕೆಲವರು ಲಂಡನ್‌ನ ರಾಯಲ್ ಕಾಲೇಜ್ ಆಫ್ ಆರ್ಟ್‌ನಲ್ಲೂ ಕಲಿತರು.

ಬೆಂಗಳೂರಿನಲ್ಲಿ ೧೯೮೪ರಲ್ಲಿ ಕೃಷ್ಣಾರೆಡ್ಡಿ ಮಾರ್ಗದರ್ಶನದ ಗ್ರಾಫಿಕ್ ಕಾರ್ಯಾಗಾರ, ೧೯೮೫ರಲ್ಲಿ ದೇವರಾಜ್ ನಡೆಸಿದ, ೧೯೮೯ರಲ್ಲಿ ಇಂಗ್ಲೆಂಡಿನ ಜೇಮ್ಸ್ ಮತ್ತು ಜಾನ್ ನಡೆಸಿದ ಹಾಗೂ ಅಕಾಡೆಮಿ ಆಗಿಂದಾಗ್ಗೆ ನಡೆಸುವ ಕಾರ್ಯಾಗಾರಗಳು ಮತ್ತು ಅಕಾಡೆಮಿ ರವೀಂದ್ರ ಕಲಾಕ್ಷೇತ್ರದ ಮಹಡಿಯಲ್ಲಿ ನಡೆಸುತ್ತಿರುವ ಗ್ರಾಫಿಕ್ ಕಾರ್ಯಾಗಾರ ನಮ್ಮಲ್ಲಿ ಗ್ರಾಫಿಕ್ ಕಲೆಗೆ ಇಂಬು ನೀಡಿವೆ. ಇನ್ನು ಗ್ರಾಫಿಕ್‌ಗಾಗಿಯೇ ನಡೆದ ಪ್ರದರ್ಶನದಲ್ಲಿ ೧೯೮೧ರಲ್ಲಿ 'ಸಂಯೋಜಿತ'

ನಡೆಸಿದ ಅಖಿಲ ಭಾರತ ಪ್ರಿಂಟ್ಸ್ ಪ್ರದರ್ಶನ, ಗ್ರಾಫಿಕ್ ಅಕಾಡೆಮಿ ನಿರ್ವಹಿತ 'Prints Today' ರಾಷ್ಟ್ರಮಟ್ಟದ ಪ್ರದರ್ಶನ ಮತ್ತು ಖಾಸಗಿ ಗ್ಯಾಲರಿಗಳಲ್ಲಿ ಆಗಿಂದಾಗ್ಗೆ ನಡೆಸುವ ಅನೇಕ ಪ್ರಿಂಟ್ ಪ್ರದರ್ಶನಗಳು ಉಲ್ಲೇಖನೀಯ.

ಕರ್ನಾಟಕದಲ್ಲಿ ಪ್ರಿಂಟ್ ಮೇಕಿಂಗ್ ಮಾಧ್ಯಮದಲ್ಲಿ ಸಕ್ರಿಯರಾಗಿರುವ ಎಲ್ಲರ ಪಟ್ಟಿಯನ್ನೂ ಇಲ್ಲಿ ನೀಡುವುದು ಅಸಾಧ್ಯವಾದರೂ ಚಂದ್ರಶೇಖರ ಸಿ., ಚಂದ್ರನಾಥ್ ಆಚಾರ್ಯ, ಜೆ.ಎಂ.ಎಸ್. ಮಣಿ, ವಿಶ್ವಂಭರ್, ಶ್ಯಾಮ್‌ಸುಂದರ್, ಜಯ್‌ಕುಮಾರ್, ಆರ್. ರಾಜಾ, ಬಸವರಾಜ್, ಎಂ. ಶ್ರೀಧರಮೂರ್ತಿ, ದೊಡ್ಡಮನಿ, ಬಾಬು ಈಶ್ವರ ಪ್ರಸಾದ್, ಅನಿಲ್ ಕುಲಕರ್ಣಿ, ಸೇತುರಾಂ ಮುರುಳಿ, ಎಸ್.ಎಚ್. ಮಶಾಳಕರ್ ಇವರೊಂದಿಗೆ ಕರ್ನಾಟಕದ ಹೊರಗುಳಿದ ನಮ್ಮ ಸುಬ್ಬಣ್ಣ, ಕೆ. ಆರ್. ವಿಜಯ್ ಬಾಗೋಡಿ ಹಾಗೂ ಪ್ರಸ್ತುತ ಲೇಖಕನನ್ನೂ ದಾಖಲಿಸಬಹುದು.

ಕಳೆದ ದಶಕಗಳ ಭಾರತದ, ಕರ್ನಾಟಕದ ಗ್ರಾಫಿಕ್‌ನ ಐತಿಹಾಸಿಕ ಅಂಶಗಳನ್ನು ಗಮನಿಸುವಾಗ ಗ್ರಾಫಿಕ್ ಮಾಧ್ಯಮ ಇಂದು ಯಾವ ಸ್ಥಿತಿಯಲ್ಲಿದೆ ಎಂಬ ಪ್ರಶ್ನೆ ಏಳುತ್ತದೆ. ಇಂತಹ ಪ್ರಶ್ನೆಗೆ ಉತ್ತರ ಸಮಾಧಾನಕರವಾಗಿಲ್ಲ. ಇಷ್ಟು ವರ್ಷಗಳ ನಂತರವೂ ಪ್ರಿಂಟ್ ಮೇಕಿಂಗ್‌ಗೆ ದೊರಕಬೇಕಾದ ಪ್ರಾಮುಖ್ಯತೆಯಾಗಲೀ, ಜನಪ್ರಿಯತೆಯಾಗಲೀ ದೊರೆತಿಲ್ಲ. ಕಲಾವಿದರು, ಕಲಾವಿಮರ್ಶಕರು, ಗ್ಯಾಲರಿಗಳು, ಸಂಗ್ರಹಕಾರರು ಇನ್ನೂ ಸಹ ಈ ಮಾಧ್ಯಮದ ಪೂರ್ಣ ಸತ್ವವನ್ನು ಮನಗಂಡಂತಿಲ್ಲ.

ಇದಕ್ಕೆ ಕಾರಣಗಳು ಅನೇಕ – ಜನಸಂಪರ್ಕದ ಕೊರತೆ, ಹೆಚ್ಚಿನ ಕಲಾವಿದರಲ್ಲಿ ಮಾಧ್ಯಮದ ತಾಂತ್ರಿಕತೆಯ ಬಗ್ಗೆ ಅಸಮಾಧಾನ, ಪ್ರಿಂಟ್‌ಗಳನ್ನು ಮಾರಲು ಸರಿಯಾದ ಅವಕಾಶಗಳಿಲ್ಲದಿರುವುದು, ಗ್ರಾಫಿಕ್ ವಿಭಾಗದಲ್ಲಿ (ಕಲಾ ಶಾಲೆಗಳ) ಶಿಕ್ಷಣದಲ್ಲಿನ ಕುಂದು ಕೊರತೆಗಳು, ರಾಜ್ಯದ ಎಲ್ಲೆಡೆ ಈ ಮಾಧ್ಯಮಕ್ಕೆ ಬೇಕಾದ ಯಂತ್ರಗಳು ಮತ್ತು ಇತರ ತಾಂತ್ರಿಕ ಸವಲತ್ತುಗಳಿಲ್ಲದಿರುವುದು– ಹೀಗೆ ಅನೇಕವನ್ನು ಪಟ್ಟಿ ಮಾಡಬಹುದು. ಆದರೆ ಅಕಾಡೆಮಿ, ಕಲಾಶಾಲೆಗಳು, ಗ್ಯಾಲರಿಗಳು, ಕಲಾವಿದ ಸಮೂಹಗಳು ಇವುಗಳ ಸೃಜನಾತ್ಮಕ, ಕ್ರಿಯಾಶೀಲ ತೊಡಗುವಿಕೆಯಿಂದ ಪ್ರಿಂಟ್ ಮೇಕಿಂಗ್‌ಗೆ ಸದ್ಯಕ್ಕಿರುವ ತೊಡಕುಗಳು ಪರಿಹಾರವಾಗಿ ಗ್ರಾಫಿಕ್‌ಗೆ ಒಳ್ಳೆಯ ದಿನಗಳು ಬರುವುದೆಂಬುದರಲ್ಲಿ ಸಂದೇಹವಿಲ್ಲ.

ಜನಪ್ರಿಯ ಕಲಾಮಾಲಿಕೆಯ ಪುಸ್ತಕಗಳು

			ರೂ.
1. ಶಿಲ್ಪಕಲೆ	–	ವಿಜಯ ರಾವ್	5–00
2. ಸ್ರ್ರಿಯಲಿಸಂ	–	ಎಸ್. ಮರಿಶಾಮಾಚಾರ್	5–00
3. ದೃಶ್ಯಕಲೆ ಎಂದರೇನು?	–	ಚಿ. ಸು. ಕೃಷ್ಣಸೆಟ್ಟಿ	5–00
4. ಇಂಪ್ರೆಷನಿಸಂ	–	ಡಾ. ಅ. ಲ. ನರಸಿಂಹನ್	5–00
5. ಅಬ್‌ಸ್ಟ್ರಾಕ್ಟ್ ಕಲೆ	–	ಆರ್. ಎ. ಶಾಂತರಾಜ್	5–00
6. ಫೋಟೋರಿಯಲಿಸಂ	–	ಕೆ. ವಿ. ಸುಬ್ರಹ್ಮಣ್ಯಂ	5–00
7. ಜನಪದ ಕಲೆ	–	ಡಾ. ಎಸ್. ಸಿ. ಪಾಟೀಲ್	5–00
8. ದೃಶ್ಯ ಕಲೆಗಳ ಗುಣ ಗ್ರಹಣ	–	ಡಾ. ಅ. ಲ. ನರಸಿಂಹನ್	5–00
9. ಸಾಂಪ್ರದಾಯಿಕ ಶಿಲ್ಪಕಲೆ	–	ಪ್ರೊ. ಶೀಲಾಕಾಂತ ಪತ್ತಾರ	5–00
10. ಪೋಸ್ಟ್ ಮಾಡರ್ನಿಸಂ	–	ನೇಮಿರಾಜ ಶೆಟ್ಟಿ	5–00
11. ಚಿತ್ರಕಲೆ ಮತ್ತು ಮನೋವಿಕಾಸ	–	ಡಾ. ಸಿ. ಆರ್. ಚಂದ್ರಶೇಖರ್	5–00

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಚಿ. ಸು. ಕೃಷ್ಣ ಸೆಟ್ಟಿ

ಸಂಪಾದಕರು